ಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸಿದ್ದೇವೆ. ಮೊನ್ನೆ ತಾನೇ ಕಾಲರಾ ಉಪದ್ರವ ತಲೆದೋರಿದಾಗಲೂ ಸೂಕ್ತ ಕಾರ್ಯಕ್ರಮ ಕೈಕೊಳ್ಳಲಾಗಿದೆ.

ಶ್ರೀ ಎಸ್. ಕರಿಯಪ್ಪ.—ನಾನು ಕೇಳಿದ್ದು, ಕಳೆದ ಆರೇಳು ವರುಷಗಳಿಂದ ಈ ತಾಲ್ಲೂಕಿನಲ್ಲಿ ಈ ಉಪದ್ರವ ಬರುತ್ತಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ?

ಶ್ರೀ ಟಿ. ಚನ್ನಯ್ಯ.—ಪ್ರತಿ ವರ್ಷವೂ ತಲೆದೋರುತ್ತಿಲ್ಲ. ಎರಡು ಮೂರು ವರ್ಷಗಳಿಗೊಂದು ಬಾರಿ ಬರುತ್ತಿದೆಯೆಂದು ಗೊತ್ತಾಗಿದೆ.

ಶ್ರೀ ಎಸ್. ಕರಿಯಪ್ಪ.—ಈಗ ಆರೇಳು ವರುಷಗಳಿಂದ ಅಲ್ಲಿ ಈ ಉಪದ್ರವ ಬರುತ್ತಿರುವುದನ್ನು ಕಂಡು ಅಲ್ಲೊಂದು ಚಲಿಸುವ ಆಸ್ಪತ್ರೆಯನ್ನು ಏರ್ಪಡಿಸಬೇಕು ಇಲ್ಲದಿದ್ದರೆ ತೊಂದರೆಯಾಗುತ್ತದೆಂದು ಸರ್ಕಾರದವರಿಗೆ ಸಲಹೆ ಮಾಡಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಸಲಹೆ ಬಂದಿದ್ದರೂ ಡಿಪಾರ್ಟ್‌ಮೆಂಟಿನವರು ಅಲ್ಲಿ ಪ್ರತ್ಯೇಕವಾಗಿ ಒಂದು ಆಸ್ಪತ್ರೆಯನ್ನು ತೆರೆಯಬೇಕೆಂಬ ಸಲಹೆಯನ್ನು ಒಪ್ಪಿಲ್ಲ.

ಶ್ರೀ ಎಸ್. ಕರಿಯಪ್ಪ.— ಕಾಲರಾ ಉಪದ್ರವ ಅಲ್ಲಿ ಜಾಸ್ತಿ ಇರುವುದರಿಂದ ಅಲ್ಲಿ ತಾಲ್ಲೂಕಿಗೆಲ್ಲಾ ಅನ್ವಯಿಸುವ ಹಾಗೆ ಹೆಲ್ತ್ ಯೂನಿಟ್ ಮಾಡಬೇಕೆಂದು ಸಲಹೆ ಮಾಡಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಸಲಹೆಮಾಡಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಆ ಸಲಹೆಯ ಮೇಲೆ ಸರ್ಕಾರದವರು ಏನು ಕಾರ್ಯಕ್ರಮ ಕೈಕೊಂಡಿದ್ದಾರೆ.

ಶ್ರೀ ಟಿ. ಚನ್ನಯ್ಯ.—ಅದು ಸರ್ಕಾರದವರ ಆಲೋಚನೆಯಲ್ಲಿದೆ.

ಶ್ರೀ ಎಸ್. ಕರಿಯಪ್ಪ.—" ಆಗಸ್ಟ್ ಎರಡನೆಯ ತಾರೀಖಿನ ದಿನ ರಿಪೋರ್ಟ್ ಬಂತು ; ಆ ದಿವಸವೇ ಅಲ್ಲಿ ಇನಾಕ್ಯುಲೇಷನ್ ವ್ಯವಸ್ಥೆ ಮಾಡಿತು " ಎಂದು ಹೇಳಿದ್ದೀರಿ. ಆದರೆ, ಪಾನ್ಸವಾಗಿ ಇನಾಕ್ಯುಲೇಷನ್ ಮಾಡಲು ವ್ಯವಸ್ಥೆ ಯಾವುದೂ ಸರಿಯಾಗಿರಲಿಲ್ಲ ವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Mr. SPEAKER.—I think you have put the sufficient number of supplementaries.

ಶ್ರೀ ಎಸ್. ಕರಿಯಪ್ಪ.—ಅಲ್ಲಿ ಖಾಯಿಲೆ ಬಂದಾಗ ಔಷಧಿಯೇ ಇಲ್ಲದಿದ್ದರೆ ಅವರು ಚಿಕಿತ್ಸೆ ಮಾಡುವುದು ಹೇಗೆ ?

Mr. SPEAKER.—The Hon'ble Member is entering into such matters the details of this question. That could be brought to the notice of the Government and he could have the remedy.

ಶ್ರೀ ಎಸ್. ಕರಿಯಪ್ಪ.—ಅಲ್ಲಿ ಔಷಧಿಯೇ ಇಲ್ಲದಿರುವುದರಿಂದ ಈ ರೀತಿಯ ಪರಿಣಾಮವಾಯಿತೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Sri K. HANUMANTHAIYA.—It is true that these epidemics take place and it is very difficult for anybody to anticipate them correctly. I may assure the Hon'ble Member that the Director of Public Health will take all humanly possible steps to prevent the recurrence of these epidemics.

Low paid officials' quarters built by the Trust Board in Jayanagar extension.

Q.—24. Sri S. KARIYAPPA (Kanakapura).—

Will the Government be pleased to state :—

(*a*) the number of quarters in Jayanagar extension constructed by the Trust Board, Bangalore City, for low paid officials ;

(*b*) the cost of each of those quarters ;

(*c*) whether they have been disposed of ?

A.—Sri T. CHANNIAH (Minister for Public Health and Local Self-Government).—

(*a*) Nil.

(*b*) and (*c*) Do not arise in view of reply to clause (*a*).

Sri S. KARIYAPPA.—I have no supplementaries.

ಶ್ರೀ ಕೆ. ಲಕ್ಕಪ್ಪ.—ಜಯನಗರದಲ್ಲೀಗ 55 ಮನೆಗಳನ್ನು ಕಟ್ಟಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಕಟ್ಟಿದೆ.

ಶ್ರೀ ಕೆ. ಲಕ್ಕಪ್ಪ.—ಕಟ್ಟಿಲ್ಲವೆಂದು ಹೇಳಿದೆಯಲ್ಲಾ !

ಶ್ರೀ ಟಿ. ಚನ್ನಯ್ಯ.—Low paid officialsಗಾಗಿ ಯಾವುದೂ ಕಟ್ಟಿಲ್ಲ ; ಅದಿರುವುದು ರೆಫ್ಯೂಜಿಗಳಿಗೆ.

Special Repair Grants for Roads for the last five years.

Q.—18. Sri B. N. BORANNA GOWDA (Belur).—

Will the Government be pleased to state:—

the total amount of Special Repair grants allotted to all the districts of Mysore State for the last five years (yearwar and districtwar figures to be furnished) ?